## ಜೀರಿಗೆ ದರ, ಮೆಂತ್ಯ ಹೆಚ್ಚಳ

ಪ್ರಮುಖ ಮಾರುಕಟ್ಟೆಗಳಿಗೆ ಜೀರಿಗೆ ಆವಕ ಇಳಿಕೆಯಾಗಿದೆಯೆನ್ನಲಾಗಿದೆ. ಪ್ರತಿಕೂಲ ಹವಾಮಾನ , ಮಳೆಯಿಂದ ಆವಕ ಇಳಿಕೆಯಾಗಿದೆಯೆನ್ನಲಾಗಿದೆ. ದಾಸ್ತಾನುಗಾರರಿಂದ ಖರೀದಿ ಹೆಚ್ಚಳದಿಂದಾಗಿ ದರ ಹೆಚ್ಚಳವಾಗುತ್ತಿದೆನ್ನಲಾಗಿದೆ. ದರಗಳು ಕೆ.ಜಿ.ಗೆ ರೂ.300 ರಿಂದ 385 ರ ತನಕ ದರವಿದೆಯೆನ್ನಲಾಗಿದೆ. ಮುಂದಿನ ವಾರದಿಂದ ಮತ್ತೆ ಆವಕ ಹೆಚ್ಚಳವಾಗುವ ಸಾಧ್ಯತೆಗಳಿವೆಯೆನ್ನಲಾಗಿದೆ.

## ಹೆಚ್ಚಿನ ಏರುಪೇರುಗಳಿಲ್ಲದ ಗೋಡಂಬಿ ದರ

ಹಿಂದಿನ ವರ್ಷ ಇದೇ ಅವಧಿಯಲ್ಲಿದ್ದ ಗೋಡಂಬಿ ದರಕ್ಕೂ ಈಗಿನ ಗೋಡಂಬಿ ದರಕ್ಕೂ ಹೆಚ್ಚಿನ ವ್ಯತ್ಯಾಸಗಳಿಲ್ಲದೇ ಸಾಮಾನ್ಯ ಒಂದೇ ಮಟ್ಟದ ದರವಿದೆ. ಕಚ್ಚಾ ಹಾಗೂ ಸಂಸ್ಕರಿತ ಗೋಡಂಬಿ ತಿರುಳು ದರಗಳಲ್ಲಿ ಹಿಂದಿನ ವರ್ಷದ ಈ ಅವಧಿಯಲ್ಲಿದ್ದ ದರ ಹೆಚ್ಚಿನ ವ್ಯತ್ಯಾಸವಿಲ್ಲದೆ ಈಗಲೂ ಮುಂದುವರಿಯುತ್ತಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಗೋಡಂಬಿ ತಿರುಳಿನ ದೇಶೀ ಬಳಕೆ ಹೆಚ್ಚಳವಿದೆ. ಹೋಟೆಲ್ ಬೇಕರಿ, ಕ್ಯಾಟರಿಂಗ್ ಫೀಲ್ಡ್‌ಗಳಿಂದ ಹೆಚ್ಚಿನ ಬೇಡಿಕೆಯಿದೆ. ಅಲ್ಲದೆ ಉತ್ಸವ ಸಮಾರಂಭಗಳಿಗಾಗಿಯೂ ಹಿಂದಿನ ವರ್ಷಕ್ಕಿಂತ ಬೇಡಿಕೆ ಹೆಚ್ಚಳವಿದೆ. ರಫ್ತು ಬೇಡಿಕೆ ಇಳಿಕೆಯಿದ್ದರೂ ದೇಶೀ ಬೇಡಿಕೆ ಹೆಚ್ಚಳವಿರುವುದರಿಂದ ಧನಾತ್ಮಕ ಅಂಶವೆನ್ನಲಾಗಿದೆ. ಕಚ್ಚಾಗೋಡಂಬಿಯೂ ಸಾಕಷ್ಟು ಲಭ್ಯವಾಗುವ ನೀರಿಕ್ಷೆಯಿದೆ.

## ಕಾಳುಮೆಣಸು ವರ್ಷದಿಂದ ವರ್ಷಕ್ಕೆ ಜಾಗತಿಕ ಬಳಕೆ ಹೆಚ್ಚಳ

ಈಗ ಕಾಳುಮೆಣಸಿನ ಜಾಗತಿಕ ವಾರ್ಷಿಕ ವ್ಯವಹಾರ ಸುಮಾರು 4.5 ಮಿಲಿಯನ್ ಡಾಲರ್‌ಗಳಿವೆಯೆನ್ನಲಾಗಿದೆ. 2029–30 ರ ಸಮಯಕ್ಕೆ 5 ಮಿಲಿಯನ್ ಡಾಲರ್‌ಗಳಿಗೂ ಮೀರಿ ಬೆಳೆಯಲಿದೆಯೆನ್ನಲಾಗಿದೆ. ಜಾಗತಿಕ ಬಳಕೆ ಪ್ರತಿ.ವರ್ಷ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಈ ವರ್ಷ ಹಿಂದಿನ ವರ್ಷಕ್ಕಿಂತ ಜಾಗತಿಕ ಉತ್ಪಾದನೆ ಇಳಿಕೆಯಾಗಿದ್ದು ಬೇಡಿಕೆ ಉತ್ತಮವಿದೆಯೆನ್ನಲಾಗಿದೆ. ಮುಂದೆ ದರ ಹೆಚ್ಚಳವಾಗುವ ಸಾಧ್ಯತೆಗಳಿವೆ.